ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374
Fax:26422377

ಸಂಖ್ಯೆ:ಇಟಿಸಿ(4)ಎಜು/ಇಂ.ಶಿ.ಮಾ-49/2010-11 ದಿನಾಂಕ:31-08-2010

ವಿಷಯ: ಚುಕ್ಕಿ ಚಿನ್ನ/ಚಿನ್ನರ ಚುಕ್ಕಿ, ಇಂಗ್ಲೀಷ್ ಶಿಕ್ಷಕರ ಮಾರ್ಗದರ್ಶಿ ಕೈಪಿಡಿಗಳ ಡಿ.ಟಿ.ಪಿ. ಮುದ್ರಣ ಮತ್ತು ಸರಬರಾಜು ಕಾರ್ಯಕ್ಕಾಗಿ ಸಂಸ್ಥೆಗಳಿಂದ ದರ ಪಟ್ಟಿಯನ್ನು ಆಹ್ವಾನಿಸಿದೆ.

2010-11 ನೇ ಸಾಲಿಗೆ ಚುಕ್ಕಿ ಚಿನ್ನ/ಚಿನ್ನರ ಚುಕ್ಕಿ, ಇಂಗ್ಲೀಷ್ ಶಿಕ್ಷಕರ ಮಾರ್ಗದರ್ಶಿ ಮುದ್ರಿಸಿ ರಾಜ್ಯದ ಎಲ್ಲಾ 33 ಜಿಲ್ಲೆಗಳ ಉಪ ನಿರ್ದೇಶಕರ(ಆಡಳಿತ)ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇಲ್ಲಿಗೆ ಸರಬರಾಜು ಮಾಡಬೇಕಾಗಿರುತ್ತದೆ. ಮಾರ್ಗದರ್ಶಿ ಕೈಪಿಡಿ ಅಂದಾಜು 150 ರಿಂದ 155 ಪುಟಗಳನ್ನು ಒಳಗೊಂಡಿರುತ್ತದೆ. 58 ಸಾವಿರ ಪ್ರತಿಗಳನ್ನು ಮುದ್ರಿಸಿ ಸರಬರಾಜು ಮಾಡಬೇಕಾಗಿರುತ್ತದೆ. ಡಿ.ಟಿ.ಪಿ. ಸಹಿತ ಮುದ್ರಿಸಿ ಸರಬರಾಜು ಮಾಡಲು ಪ್ರತಿ ಪುಟಕ್ಕೆ ತಗಲುವ ದರವನ್ನು ಎಲ್ಲಾ ತೆರಿಗೆಗಳು ಸೇರಿದಂತೆ (Inclusive of all taxes) ಇಚ್ಛೆವುಳ್ಳ ಸಂಸ್ಥೆಗಳಿಂದ ದರಪಟ್ಟಿಯನ್ನು ಅಹ್ವಾನಿಸಿದೆ. ದಿನಾಂಕ 06-09-2010 ಸಂಜೆ 5.00 ಗಂಟೆ ಒಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ನಂ.4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3 ನೇ ಹಂತ, ಹೊಸಕೆರೆಹಳ್ಳಿ, ಬೆಂಗಳೂರು-85 ಇಲ್ಲಿಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸಲು ತಿಳಿಸಿದೆ.

ಕೈಪಿಡಿಗಳ ಮುದ್ರಣಕ್ಕಾಗಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ದರಪಟ್ಟಿಯನ್ನು ನೀಡುವುದು.

1. ಮುಖಪುಟ ಮತ್ತು ಹಿಂಬದಿಯ ಪುಟಗಳನ್ನು ಬಹು ವರ್ಣದಲ್ಲಿ 300 ಜಿ.ಎಸ್.ಎಂ., ಆರ್ಟ್ ಬೋರ್ಡ್ 1/4th Demmy ಅಳತೆಯ ಪೇಪರ್‌ನಲ್ಲಿ ಡಿ.ಟಿ.ಪಿ. ಸೇರಿದಂತೆ ಮುದ್ರಣಕ್ಕೆ ಪ್ರತಿ ಪುಟಕ್ಕೆ ತಗಲುವ ದರ.
2. ಒಳ ಪುಟಗಳನ್ನು ಏಕ ವರ್ಣದಲ್ಲಿ (ಕಪ್ಪು ಬಿಳುಪು) 1/4th Demmy ಅಳತೆಯ 80 GSM ಮ್ಯಾಪ್ ಲಿಥೋ ಕಾಗದದಲ್ಲಿ ಡಿ.ಟಿ.ಪಿ. ಸೇರಿದಂತೆ ಮುದ್ರಣಕ್ಕೆ ಪ್ರತಿ ಪುಟಕ್ಕೆ ತಗಲುವ ದರ.
3. ಮುದ್ರಿಸಬೇಕಾದ ಸಾಹಿತ್ಯವನ್ನು ಈ ಕಛೇರಿಯಿಂದ ನೀಡಲಾಗುವುದು, ಅಂತಿಮ ಮುದ್ರಣ ಮಾಡುವ ಮೊದಲು ಕನಿಷ್ಟ 3 ಪ್ರೂಫ್‌ಗಳನ್ನು ನೀಡಿ ಅನುಮೋದನೆ ಪಡೆಯುವುದು.
4. ದರಪಟ್ಟಿಯೊಂದಿಗೆKST/CST ನೊಂದಾಯಿಸಿರುವ ಬಗ್ಗೆ ದಾಖಲೆ ನೀಡಬೇಕು.
5. ಕೈಪಿಡಿಗಳನ್ನು Perfect Binding ಮಾಡಬೇಕು.
6. ಡಿ.ಟಿ.ಪಿ. ಮಾಡಿದ ಅಂತಿಮ ಸಾಮಾಗ್ರಿಯ ಸಿ.ಡಿ. ನೀಡಬೇಕು.
7. ಒಟ್ಟು ಮೊತ್ತದ ಶೇ.10 ರಷ್ಟು EMD ಯನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ನೀಡಬೇಕು.
8. ನಿರ್ವಹಿಸಿದ ಕಾರ್ಯ ತೃಪ್ತಿಕರವಾಗಿದೆಯೆಂದು ಪರಿಶೀಲಿಸಿದ ನಂತರ ಹಣ ಪಾವತಿಸಲಾಗುವುದು. ಯಾವುದೇ ಮುಂಗಡ ಹಣ ನೀಡಲಾಗುವುದಿಲ್ಲ.
9. ಕಾರ್ಯಾದೇಶ ನೀಡುವ ಕುರಿತು ನಿರ್ದೇಶಕರ ತೀರ್ಮಾನ ಅಂತಿಮವಾಗಿರುತ್ತದೆ.
10. ಸೀಲು ಮಾಡಿದ ಲಕೋಟೆ ಮೇಲೆ "ಚುಕ್ಕಿಚಿನ್ನ /ಚಿನ್ನರ ಚುಕ್ಕಿ ಇಂಗ್ಲೀಷ್ ಶಿಕ್ಷಕರ ಮಾರ್ಗದರ್ಶಿ ಮುದ್ರಣ ಮತ್ತು ಸರಬರಾಜುಗಾಗಿ ದರಪಟ್ಟಿ ಎಂದು ನಮೂದಿಸಿರಬೇಕು.

ಈ ಮೇಲಿನ ಎಲ್ಲಾ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ದಿನಾಂಕ 06-09-2010 ರಂದು ಸಂಜೆ 5 ಗಂಟೆ ಒಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಮೇಲೆ ತಿಳಿಸಿರುವ ನಿರ್ದೇಶಕರ ವಿಳಾಸಕ್ಕೆ ಕಳುಹಿಸುವುದು. sd/-

ನಿರ್ದೇಶಕರು (ಸಂ ಮತ್ತು ತ)

\\p4comp32\p4comp32\y10-11\Word File\English-2010-up.doc